ಕಳೆದ ಮೂರು ವರ್ಷದಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನನ್ನ ಕ್ಷೇತ್ರಕ್ಕೆ ಕೊಡಿ ಎಂದು ಕೇಳುತ್ತಿದ್ದೇನೆ. ಆದರೆ ನಮಗೂ ಸಹ ಕ್ಷೇತ್ರಕ್ಕೆ ಮಾತ್ರ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದು ಸರಿಯಲ್ಲ.

ಉಡುಪಿ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ

156 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಉಡುಪಿ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ಮಂಜೂರಾದ ಕುಡಿಯವ ನೀರಿನ ಯೋಜನೆಗಳೆಷ್ಟು? ಪೂರ್ಣಗೊಂಡಿರುವ ಯೋಜನೆಗಳೆಷ್ಟು ?

ಆ) ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆ ಕುಂಠಿತವಾಗಲು ಕಾರಣವೇನು ?

ಇ) ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) 1. ಮಾದರಿ ಗ್ರಾಮ : 1

2. ಮೊದಲ ಹಂತದ ಗ್ರಾಮಗಳು : 8

3. ಎರಡನೇ ಹಂತದ ಗ್ರಾಮಗಳು : 19

ಒಟ್ಟು **28**

ಮಾದರಿ ಗ್ರಾಮವಾದ ಹೊಂಬಾಡಿ ಮುಂಡಾಡಿಯ ಯೋಜನೆಯು ಪೂರ್ಣಗೊಂಡಿದೆ.

ಆ) ಮೊದಲ ಹಂತದ ಒಂಭತ್ತ ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳನ್ನು ತೆಗೆದುಕೊಂಡಿರುವ ಗುತ್ತಿಗೆದಾರರು ಮಂದಗತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರಿಗೆ ವಿಳಂಬ ಮಾಡಿರುವುದಕ್ಕೆ ದಂಡ ವಿಧಿಸಲಾಗುತ್ತದೆ. ಹಾಗೂ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿರುತ್ತದೆ.

ಎರಡನೆ ಹಂತದ ಯೋಜನೆಗಳ ನೀರು ಸರಬರಾಜು ಕಾಮಗಾರಿಕೆಗಳಿಗೆ ಈಗಾಗಲೇ ಟೆಂಡರ್‌ಗಳನ್ನು ಕರೆಯಲಾಗಿದೆ.

ಇ) ಯೋಜನೆಯಲ್ಲಿ ಒಳಗೊಂಡಿರುವ ಎಲ್ಲ ಗ್ರಾಮಗಳ ಕಾಮಗಾರಿಗಳನ್ನು ಯೋಜನೆಯ ಅಂತ್ಯದ ವೇಳೆಗೆ ಅಂದರೆ 31-12-1999 ರೊಳಗೆ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಉಡುಪಿ ಜಿಲ್ಲೆಯಲ್ಲಿ ವಿಶ್ವಬ್ಯಾಂಕಿನ ಯೋಜನೆಯಡಿ ಮಂಜೂರಾದ ಕುಡಿಯುವ ನೀರಿನ ಯೋಜನೆಗಳು ಮಾದರಿ ಗ್ರಾಮ-1, ಮೊದಲ

ಹಂತದ ಗ್ರಾಮಗಳು 8 ಮತ್ತು 2ನೇ ಹಂತದ ಗ್ರಾಮಗಳು 19 ಹೀಗೆ ಒಟ್ಟು 28 ಯೋಜನೆಗಳಿದ್ದು ಅದರಲ್ಲಿ ಮಾದರಿ ಗ್ರಾಮದಲ್ಲಿನ ಒಂದು ಯೋಜನೆ ಮಾತ್ರ ಪೂರ್ಣಗೊಂಡಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ ಉಳಿದ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿಲ್ಲ, ಮತ್ತು ಗುತ್ತಿಗೆದಾರರು ಮಂದಗತಿಯಲ್ಲಿ ಕೆಲಸ ನಿರ್ವಹಿಸಿರುವುದರಿಂದ ಅವರಿಗೆ ಸೂಚನೆ ಕೊಟ್ಟಿದ್ದೇವೆ, ದಂಡ ವಿಧಿಸುತ್ತೇವೆ ಎನ್ನುವಂಥ ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳತಕ್ಕಂಥದ್ದು ಏನೆಂದರೆ - ವಿಶ್ವಬ್ಯಾಂಕ್ ಯೋಜನೆ ಎನ್ನುವಂಥದ್ದು ರೈತರಿಗೆ ಅಥವಾ ಜನರಿಗೆ ಶಾಪ ಆಗಬಾರದು. ಕುಡಿಯಲಿಕ್ಕೆ ನೀರು ಇಲ್ಲ, ವಿಶ್ವಬ್ಯಾಂಕ್ ಯೋಜನೆಯಲ್ಲಿ ನೀರು ಕೊಡುತ್ತೇವೆಂದು ನಾವು ಹೇಳುತ್ತೇವೆ, ಆದರೆ ಬರೀ ಈ ಯೋಜನೆಯಿಂದ ಕುಡಿಯುವ ನೀರು ತರಲಿಕ್ಕೆ ಆಗುವುದಿಲ್ಲ. ಈ ರೀತಿ ನೆನೆಗುದಿಗೆ ಬಿದ್ದಿರತಕ್ಕಂಥ ಬಹಳಷ್ಟು ಯೋಜನೆಗಳಿವೆ. ಬಹುಶ: ಗುತ್ತಿಗೆದಾರರ ಗುತ್ತಿಗೆ ಅವಧಿ ಮುಗಿದ ತಕ್ಷಣ ರದ್ದು ಮಾಡಿ ಸರ್ಕಾರ ಬೇರೆ ಮೂಲದಿಂದ ಕೆಲಸ ಮಾಡಿಸಿದರೆ ನಾವು ಕುಡಿಯುವ ನೀರಿನ ಕಾಮಗಾರಿ ಬೇಗ ಮುಗಿಯುತ್ತದೆ ಎನ್ನುವ ನಿರೀಕ್ಷಣೆ ಮಾಡಲಿಕ್ಕೆ ಹಾಗೂ ಆ ಕೆಲಸ ಪೂರ್ಣಗೊಳ್ಳುವದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ತಾವು ಏನಾದರೂ ಕಾರ್ಯಕ್ರಮವನ್ನು ಹಾಕಿ ಕೊಳ್ಳುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರತಾಪಚಂದ್ರ ಶೆಟ್ಟರು ಹೇಳಿದ ಹಾಗೆ ಈ ಕುಡಿಯುವ ನೀರಿನ ಯೋಜನೆಯ ಕಾರ್ಯನಿರ್ವಹಣೆಯಲ್ಲಿ ವಿಳಂಬವಾಗಿದೆ. 17-8-1997ಕ್ಕೆ ಈ ಕಾಮಗಾರಿ ಕೆಲಸ ಮುಗಿಯಬೇಕಾಗಿತ್ತು. ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಸೂರ್ಯಪ್ರಕಾಶ್ ರಾವ್ ಎನ್ನುವ ಗುತ್ತಿಗೆದಾರರು ಮಂದಗತಿಯಲ್ಲಿ ನೀರು ಸರಬರಾಜು ಕಾಮಗಾರಿಗಳನ್ನು ಮಾಡಿದ್ದರಿಂದ ಸುಮಾರು ಏಳೂವರೆ ಲಕ್ಷ ರೂಪಾಯಿಗಳ ದಂಡವನ್ನು ಅತನ ಮೇಲೆ ವಿಧಿಸಿದ್ದೇವೆ. ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿಯಿಂದ ನಮ್ಮ ಅನೇಕ ಕಾರ್ಯಕ್ರಮಗಳು ಈ ರೀತಿ ತಡ ಆಗಿವೆ. ನಮ್ಮ ಇಂಜಿನಿಯರಿಂಗ್ ಚೀಪ್ ಅವರು 2-4-1998 ರಂದು ಈ ವಿಚಾರದಲ್ಲಿ ಪರಿಶೀಲನೆ ಮಾಡಿ ಒಂದು ಸಭೆ ಕರೆದಿದ್ದರು. ಮೇ ತಿಂಗಳ ಅಂತ್ಯ ಭಾಗದಲ್ಲಿ ಈ 9 ಯೋಜನೆಗಳ ಕಾಮಗಾರಿ ಕೆಲಸವನ್ನು ಮುಗಿಸಿಕೊಡುತ್ತೇವೆಂದು ಅವರು ಬರೆದು ಕೊಟ್ಟಿದ್ದಾರೆ. ನಾವು ಆ ಟೆಂಡರನ್ನು ರದ್ದು ಮಾಡಬೇಕೆಂದು ಯೋಚನೆ ಮಾಡಿದ್ದೆವು. ಆದರೆ ಟೆಂಡರನ್ನು ರದ್ದು ಮಾಡಿದರೆ ಮತ್ತೆ ಕಾಮಗಾರಿ ಕೆಲಸ ವಿಳಂಬವಾಗತಕ್ಕಂಥ ಸಂಭವ ಹೆಚ್ಚು. ಏಕೆಂದರೆ ಈಗಾಗಲೇ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚು ಕೆಲಸ ಅವರೇ ನಿರ್ವಹಿಸಿರುವುದರಿಂದ ಮತ್ತೆ ಬೇರೆಯವರು ಅಲ್ಲಿ ಪ್ರವೇಶ ಮಾಡತಕ್ಕಂಥದ್ದು ಸರಿ ಆಗುವುದಿಲ್ಲ. ಒಂದು ವೇಳೆ ಅವರ ಗುತ್ತಿಗೆಯನ್ನು ರದ್ದು ಮಾಡಿದರೂ ಕೂಡ ಬಹಳ ಸಮಯ ಬೇರೆ ಗುತ್ತಿಗೆದಾರರು ತೆಗೆದುಕೊಳ್ಳುತ್ತಾರೆ ಎನ್ನುವುದಕ್ಕಾಗಿಯೇ ಮೊದಲಿನ ಟೆಂಡರನ್ನು ರದ್ದು ಮಾಡದೆ ಅವರಿಗೆ ಏಳೂವರೆ ಲಕ್ಷ ರೂಪಾಯಿ ದಂಡ ವಿದಿಸಿದ್ದಲ್ಲದೆ ಅವರ ಮೇಲೆ ಕ್ರಮವನ್ನೂ ಕೂಡ ಕೈಗೊಂಡಿದ್ದೇವೆ. ಮೇ ತಿಂಗಳ ಅಂತ್ಯ ಭಾಗದಲ್ಲಿ 9 ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸುತ್ತೇವೆ. ಎರಡನೆ ಹಂತದ ಯೋಜನೆಗಳ ನೀರು ಸರಬರಾಜಿನ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್‌ಗಳನ್ನು ಕರೆದಿದ್ದೇವೆ. 13 ಗ್ರಾಮಗಳಿಗೆ ಟೆಂಡರ್‌ಗಳನ್ನು ಕರೆದು ಫೈನಲೈಸ್

ಮಾಡಿಕೊಟ್ಟಿದ್ದೇವೆ. ಇನ್ನು 5 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಬಗ್ಗೆ ಟೆಂಡರ್ ಆಗತಕ್ಕಂಥದ್ದು ಇದೆ. ಇದನ್ನು ಕೂಡ ನಾವು ತೀವ್ರಗತಿಯಲ್ಲಿ ಮಾಡಿ ಮುಗಿಸುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಉಪಾಧ್ಯಕ್ಷರೆ, ಈ ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆಗೆ ಸಂಬಂಧಪಟ್ಟಂತೆ ನಮ್ಮ ಕಾರ್ಕಳ ಕ್ಷೇತ್ರದಲ್ಲಿ ಕೂಡ ಬಜಗೋಳಿ, ಹೆಬ್ರಿ ಮುಂತಾದ ಕಡೆ ಕುಡಿಯುವ ನೀರಿನ ಕಾಮಗಾರಿಯನ್ನು ನೋಡಿದಾಗ ಸರಿಯಾಗಿ ಕಾಮಗಾರಿಗಳು ಆಗುತ್ತಿಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ ಈ ವಿಶ್ವಬ್ಯಾಂಕಿನ ಯೋಜನೆಗಳನ್ನು ಜಿಲ್ಲಾಪಂಚಾಯತಿಯವರೇ ಇಂಪ್ಲಿಮೆಂಟ್ ಮಾಡಲಿ. ಈಗ ಯಾರೋ ಒಬ್ಬ ಇಂಜಿನಿಯರ್ ಉಡುಪಿಯಲ್ಲಿ ಕುಳಿತುಕೊಂಡು ಕೆಲಸ ಮಾಡುವುದರಿಂದ ಒಂದು ಕಡೆ ಈ ಕೆಲಸ ವಿಳಂಬವಾಗುತ್ತದೆ, ಇನ್ನೊಂದು ಕಡೆ ಅದಕ್ಕೆ ಖರ್ಚುಮಾಡತಕ್ಕಂಥ ಹಣ ಕೂಡ ವ್ಯರ್ಥವಾಗುತ್ತದೆ. ಇಂಪ್ಲಿಮೆಂಟೇಷನ್ ಸ್ಟೇಜ್‌ನಲ್ಲಿ ಯಾವುದಾದರೂ ದೂರು ಇದ್ದರೂ ಕೂಡ ಅವರು ಯಾವುದೇ ರೀತಿಯಲ್ಲಿ ಇದಕ್ಕೆ ಸ್ಪಂದಿಸುವುದೂ ಕೂಡ ಇಲ್ಲ. ಆ ಕೆಲಸವನ್ನು ಮಾಡಿಸುವಂಥದ್ದು ಪೂರ್ತಿಯಾಗಿ ಅಸ್ತವ್ಯಸ್ತವಾಗಿದೆ. ನಾನು ಹೇಳುವುದೇನೆಂದರೆ ದಯಮಾಡಿ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ಎಲ್ಲಾ ಕಡೆ ಕೂಡ ಇದರ ಬಗ್ಗೆ ತಾವು ರಿವ್ಯೂ ಮಾಡಬೇಕು. ಯಾರೋ ಕನ್ಸಲ್ಟೆಂಟ್, ಯಾರೋ ಇಂಜಿನಿಯರ್ ಮುಖಾಂತರ ಹಣ ಖರ್ಚಾಗುವುದು ಬಿಟ್ಟು ಇನ್ನು ಏನೂ ಇಲ್ಲ. ಅಲ್ಲಿಯ ವಸ್ತುಸ್ಥಿತಿ ನೋಡಿದರೆ ಯಾವ ಯೋಜನೆ ಕೂಡ ಸರಿಯಾಗಿ ಇಂಪ್ಲಿಮೆಂಟ್ ಆಗಿಲ್ಲ. ಇಲ್ಲಿ ಯಾರು ಬಿಲ್ ಮಾಡುತ್ತಾರೋ, ಎಲ್ಲಿ ಹಣ ಮಾಡುತ್ತಾರೋ ನಮಗಂತೂ ಇದು ಅರ್ಥವಾಗುತ್ತಿಲ್ಲ. ಆದ್ದರಿಂದ ಸರ್ಕಾರ ವಿಶ್ವಬ್ಯಾಂಕಿನ ಎಲ್ಲಾ ಯೋಜನೆಗಳ ಬಗ್ಗೆ ಅದರಲ್ಲೂ ಮುಖ್ಯವಾಗಿ ಕುಡಿಯುವ ನೀರಿನ ಯೋಜನೆ ಎಷ್ಟು ನಿಷ್ಫಲವಾಗಿದೆ, ಎಷ್ಟು ವ್ಯರ್ಥವಾಗಿದೆ, ಎಷ್ಟು ಪ್ರಯೋಜನವಾಗಿದೆ, ಎಷ್ಟು ವಿಳಂಬವಾಗಿದೆ ಎನ್ನುವುದರ ಬಗ್ಗೆ ಸಂಪೂರ್ಣ ತನಿಖೆ ನಡೆಸಿ, ಇದರ ಬಗ್ಗೆ ತಾವೇ ಸ್ವತಃ ವಿಮರ್ಶೆ ನಡೆಸಿ ವರದಿ ಮಾಡುವುದು ಒಳ್ಳೆಯದು. ಉಡುಪಿಯಲ್ಲಂತೂ ಸುಮ್ಮನೆ ಹೆಸರಿಗೆ ಮಾತ್ರ ವಿಶ್ವಬ್ಯಾಂಕ್ ಯೋಜನೆ ಹೊರತು ಅಲ್ಲಿಗೆ ಈ ವಿಶ್ವಬ್ಯಾಂಕ್ ಯೋಜನೆ ಏಕೆ ಬಂತು? ಎನ್ನುವ ಒಂದು ರೀತಿಯ ಅಭಿಪ್ರಾಯ ಬಂದುಬಿಟ್ಟಿದೆ. ಇದರ ಬಗ್ಗೆ ಒಬ್ಬ ಇಂಜಿನಿಯರ್ ಏನು ಕೆಲಸ ಮಾಡಿಸುತ್ತಾರೋ ನಮಗಂತೂ ಗೊತ್ತಾಗುತ್ತಿಲ್ಲ. ಆದ್ದರಿಂದ ದಯಮಾಡಿ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ವಿಶ್ವಬ್ಯಾಂಕ್ ಯೋಜನೆಯ ಪ್ರಾಸ್ತವಿಕ ಒಪ್ಪಂದ 1989ರಲ್ಲಿ ಆಯಿತು. ಅದಾದನಂತರ ಅದರ ಕಾರ್ಯವ್ಯಾಪ್ತಿಯನ್ನು 1993ನೇ ಇಸವಿಯಲ್ಲಿ ಪ್ರಾರಂಭ ಮಾಡಿರತಕ್ಕಂಥದ್ದಾಗಿದೆ. 1993ರ ಸಾಲಿನಲ್ಲಿ ಸರ್ಕಾರ ವಿಶ್ವಬ್ಯಾಂಕಿನ ಜೊತೆ ಒಂದು ಒಪ್ಪಂದಕ್ಕೆ ಬಂತು. ಆ ಒಪ್ಪಂದದ ಪ್ರಕಾರ ಇಲ್ಲದ ಷರತ್ತುಗಳಿಗೆ ಒಳಗಾಗಿ ಅನೇಕ ಸಂದರ್ಭಗಳಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವವರೆಗೆ ಯಾವುದೇ ಟೆಂಡರಿನ ಫೈನಲೈಜೇಷನ್ ಕೂಡ ಆಗಿಲ್ಲ. ಕ್ಯಾಬಿನೆಟ್‌ನಲ್ಲಿ ನಿರ್ಣಯವನ್ನು ಮಾಡಿಕೊಂಡು, ಒಂದು ಎಂಪವರ್ ಕಮಿಟಿ ಎಂದು ಮಾಡಿ, ಆ ಎಂಪವರ್ ಕಮಿಟಿಯಲ್ಲಿ ಕಾರ್ಯದರ್ಶಿಗಳ ಮಟ್ಟದ ಅಧಿಕಾರಿಗಳು ಇದ್ದು ಸಭೆಯನ್ನು ಕೂಡ

ಮಾಡಿದರು. ಆದರೂ ಕೂಡ ಯಾವುದೇ ಒಂದು ಫೈನಲೈಸ್ ಮಾಡದಿದ್ದುದರಿಂದ ಅದಕ್ಕೆ ಪೂರ್ವಾನ್ವಯವಾಗಿರತಕ್ಕಂಥ ಟೆಂಡರ್‌ನೊಂದಿಗೆ ಇರತಕ್ಕಂಥವರನ್ನೇ ಕರೆಯಬೇಕು, 50 ಕೋಟಿ ರೂಪಾಯಿಗಳಷ್ಟು ಕೆಲಸ ಮಾಡಿದಂಥ ಅನುಭವ ಇದ್ದಂಥವರೇ ಇದರಲ್ಲಿ ಭಾಗವಹಿಸಬೇಕು, ಹೀಗೆ ಈ ಎಲ್ಲಾ ಷರತ್ತುಗಳು ಇದ್ದುದ್ದರಿಂದ ಮೊದಲನೇ ಹಂತದ ಕಾರ್ಯ ಪ್ರಾರಂಭವಾಗಲೇ ಇಲ್ಲ. ಅದು ಆದಮೇಲೆ ನಾವು ವಿಶ್ವಬ್ಯಾಂಕಿನವರ ಜೊತೆ ಮಾತನಾಡಿ, ಆ ಷರತ್ತುಗಳನ್ನೆಲ್ಲಾ ರದ್ದುಪಡಿಸಿ ಕಡಿಮೆ ಹಣ ಇರತಕ್ಕಂಥ ಕೆಲಸಗಳನ್ನೆಲ್ಲಾ ಮಾಡಿದ ಮೇಲೆ ಈಗ ಅನೇಕ ಜನರು 2ನೇ ಹಂತದ ಯೋಜನೆಯಲ್ಲಿ ಪಾರ್ಟಿಸಿಪೇಟ್ ಮಾಡುತ್ತಿದ್ದಾರೆ. ಒಂದನೇ ಹಂತದಲ್ಲಿ ಆಗಿರತಕ್ಕಂಥ ವಿಳಂಬಕ್ಕೆ ದಂಡ ವಿದಿಸುವಂಥ ಕಾಲಂನ್ನೂ ಕೂಡ ಹಿಂದಿನ ಸರ್ಕಾರ ಒಪ್ಪಂದ ಮಾಡಿಕೊಂಡಾಗ ಆ ಷರತ್ತಿನಲ್ಲಿ ಕೈಬಿಟ್ಟು ಹೋಗಿತ್ತು. ಈಗ ವಿಶ್ವಬ್ಯಾಂಕಿನವರು ಅಂಥ ದಂಡ ವಿದಿಸುವಂಥ ಪ್ರಕ್ರಿಯೆಯನ್ನು ಮಾಡಬಹುದೆಂದೂ ಕೂಡ ಹೇಳಿದರು. ಸುಮಾರು 83 ಜನ ಹೊಸದಾಗಿ ಅಧಿಕಾರಿಗಳನ್ನು ಬೇರೆ ಬೇರೆ ಇಲಾಖೆಗೆ ಸಂಬಂಧಪಟ್ಟಂತೆ ನೇಮಕಾತಿ ಮಾಡತಕ್ಕಂಥದ್ದಕ್ಕೆ ಕೂಡ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಈಗ ತೀವ್ರಗತಿಯಲ್ಲಿ ಕೆಲಸ ನಡೆಯುತ್ತಿದೆ. ಮೇ ತಿಂಗಳೊಳಗಾಗಿ9 ಯೋಜನೆಗಳನ್ನು ಸಂಪೂರ್ಣವಾಗಿ ಮುಗಿಸಿಕೊಡುತ್ತಿದ್ದೇವೆ. ಈ ದಕ್ಷಿಣ ಕನ್ನಡ ಜಿಲ್ಲೆಯ ಜೊತೆಗೆ ಶಿವಮೊಗ್ಗದಲ್ಲಿ ಕೂಡ ಇದೇ ರೀತಿ ಆಗಿದೆ ಎನ್ನುವ ವಿಚಾರವನ್ನು ಶ್ರೀ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡಿದ ಮೇಲೆ ಸೂರ್ಯಪ್ರಕಾಶ್‌ರಾವ್‌ರವರನ್ನು ನಾವು ಕರೆದು ದಂಡ ವಿದಿಸಿ ಅವರನ್ನು ಕಪ್ಪುಪಟ್ಟಿಯಲ್ಲಿ ಸೇರಿಸಬೇಕೆನ್ನುವ ಪ್ರಯತ್ನವನ್ನೂ ಕೂಡ ಮಾಡಿದ್ದೆವು. ಇದು ಮೊದಲನೆ ಹಂತದಲ್ಲಿ ಆಗಿರತಕ್ಕಂಥ ಒಂದು ಸಣ್ಣ ತಪ್ಪಿನಿಂದ, ಅಚಾತುರ್ಯದಿಂದ, ಷರತ್ತುಗಳ ಅನುಕೂಲಗಳನ್ನು ಪಡೆದುಕೊಂಡು ಮಾಡಿರತಕ್ಕಂಥದ್ದು ಆಗಿದೆ. ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯಲ್ಲಿ ಯಾವುದೇ ಸಂದರ್ಭದಲ್ಲಿ ಮಾರ್ಕೆಟ್ ರೇಟಿಗಿಂತ ಶೇಕಡ 32ಕ್ಕಿಂತಲೂ ಹೆಚ್ಚು ಎಸ್.ಆರ್ ಆಗದಂತೆ ನೋಡಿಕೊಂಡು ಇವುಗಳನ್ನೆಲ್ಲಾ ಒಪ್ಪಂದ ಮಾಡಿಸಿಕೊಂಡಿದ್ದೇವೆ. ಈ ಷರತ್ತಿನಲ್ಲಿ ಕುಡಿಯುವ ನೀರಿನ ಕಾಮಗಾರಿ ಮುಗಿಸಿಕೊಡುವುದಕ್ಕೆ 32 ತಿಂಗಳ ಅವಧಿ ಕೊಡಲಾಗಿತ್ತು. ಈಗ ವಿಶ್ವಬ್ಯಾಂಕಿನವರ ಜೊತೆ ಮಾತನಾಡಿ ಷರತ್ತನ್ನು ಸಡಿಲ ಮಾಡಿ 32 ತಿಂಗಳ ಅವಧಿ ಇದ್ದುದನ್ನು 18 ತಿಂಗಳೊಳಗಾಗಿ ಕಾಮಗಾರಿ ಕೆಲಸ ಮುಗಿಸಿಕೊಡತಕ್ಕಂಥದ್ದನ್ನೂ ಕೂಡ ಮಾಡಿದ್ದೇವೆ. ಆದ್ದರಿಂದ ತಾವು ಏನು ಹೇಳಿದ್ದೀರಿ ಅದು ವಿಳಂಬವಾಗಿರತಕ್ಕಂಥದ್ದು ನಿಜ. ಆದರೆ ಈಗ ಅದಕ್ಕೆ ಸರಿಯಾದಂಥ ಕ್ರಮವನ್ನು ಕೈಗೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ವಿಶ್ವಬ್ಯಾಂಕಿನ ಕುಡಿಯುವ ನೀರಿನ ಯೋಜನೆಗೆ ಸಂಬಂಧಪಟ್ಟಂತೆ ನನಗೆ ಗೊತ್ತಿದ್ದ ಹಾಗೆ ಕೆಲವು ಹಳ್ಳಿಗಳಲ್ಲಿ ವಾಲೆಂಟರಿ ಏಜೆನ್ಸಿಯಿಂದ ಮಾಡಬೇಕು ಎನ್ನುವಂಥದ್ದು ಇದೆ. ಅದಕ್ಕೆ ಕಾಂಟ್ರಿಬ್ಯೂಷನ್ ಕೂಡ ಹಳ್ಳಿಯವರೇ ಕೊಡಬೇಕೆಂದು ಇದೆ. ಅನೇಕ ಹಳ್ಳಿಗಳಲ್ಲಿ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಕಾಂಟ್ರಿಬ್ಯೂಷನನ್ನು ಸಂಗ್ರಹ ಮಾಡುವುದಕ್ಕೆ ಆಗುವುದಿಲ್ಲ. ಅದು ವಾಟರ್ ಸಪ್ಲೈ ಸ್ಕೀಂ ಇರಬಹುದು, ರೂರಲ್ ಡೆವಲಪ್‌ಮೆಂಟ್ ಸ್ಕೀಂ ಇರಬಹುದು, ರಸ್ತೆ ರಿಪೇರಿ ಇರಬಹುದು ಅಥವಾ ಚರಂಡಿ ದುರಸ್ತಿ ಇರಬಹುದು. ಅದಕ್ಕೆ ನನ್ನ ಸಲಹೆ ಏನೆಂದರೆ ಹಿಂದೆ ಜಿಲ್ಲಾ ಗ್ರಾಮೀಣಾಭಿವೃದ್ಧಿ ಸೊಸೈಟಿ ಎಂದು ರಿಜಿಸ್ಟರ್ಡ್ ಸೊಸೈಟಿ ಇತ್ತು. (ಡಿಸ್ಟ್ರಿಕ್ಟ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ). ಅದಕ್ಕೆ ಅಧ್ಯಕ್ಷರಾಗಿ ಡೆಪ್ಯುಟಿ ಕಮಿಷನರ್ ರವರು

ಇದ್ದರು. ಅಂದರೆ ಅದು ವಾಲಂಟರಿ ಏಜೆನ್ಸಿ ಮುಖಾಂತರ ಕೆಲಸ ಮಾಡತ್ತಿತ್ತು. ಜನರೇ ಮುಂದೆ ಬಂದು ಕೆಲಸ ಮಾಡಬೇಕಾಗಿತ್ತು, ಆದರೆ ಬಹಳ ಕಡೆ ಅವರು ಮಾಡುವುದಿಲ್ಲ. ನಾವು ಎಷ್ಟೇ ಒತ್ತಾಯ ಮಾಡಿ, ಅವರಿಗೆ ಪ್ರೇರಣೆ ಕೊಟ್ಟರೂ ಕೂಡ, ಅವರಿಗೆ ಎಂಕರೇಜ್‌ಮೆಂಟ್ ಕೊಟ್ಟರೂ ಸಹ ಅವರು ಮಾಡುತ್ತಿಲ್ಲ. ಆದ್ದರಿಂದ ದಯವಿಟ್ಟು ಆ ಸೊಸೈಟಿಗಳನ್ನು ರಿನ್ಯೂ ಮಾಡಿ ಅಲ್ಲಿಯ ಡಿ.ಸಿ.ಯವರಿಗೆ ಅಧಿಕಾರ ಕೊಟ್ಟರೆ ವಿಶ್ವಬ್ಯಾಂಕಿನ ಎಲ್ಲಾ ಯೋಜನೆಗಳು ಎಲ್ಲಾ ಕಡೆ ಇಂಪ್ಲಿಮೆಂಟ್ ಆಗುತ್ತದೆ. ಆ ಸೊಸೈಟಿಗೆ ಡಿ.ಸಿ.ಯವರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿ ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವನ್ನಾದರೂ ಅಧ್ಯಕ್ಷರನ್ನಾಗಿ ಮಾಡಿದರೆ, ಹೆಚ್ಚುಕಡಿಮೆ ಸ್ವಲ್ಪ ಹಣವನ್ನು ಊರಿನವರು ಕಲೆಕ್ಟ್ ಮಾಡುತ್ತಾರೆ, ಇಲ್ಲ ಎಂದರೆ ಜಿಲ್ಲಾಪಂಚಾಯಿತಿ ನಿಂದಲೇ ಯಾವುದೋ ಒಂದು ರೂಪದಲ್ಲಿ ಹಣ ಕೂಡಿಸಿಕೊಟ್ಟು ವಿಶ್ವಬ್ಯಾಂಕಿನ ಯೋಜನೆಯನ್ನು ರಾಜ್ಯದ ಎಲ್ಲಾ ಭಾಗದಲ್ಲಿ ಇಂಪ್ಲಿಮೆಂಟ್ ಮಾಡುವುದಕ್ಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಆ ಗ್ರಾಮಗಳಲ್ಲಿ ಜನರ ಭಾಗದಿಂದ ಬರಬೇಕಾದಂಥ ಹಣವನ್ನು ಕೊಡುವುದಕ್ಕೆ ಆಗದಿರುವಂಥದ್ದು, ಹಣವನ್ನು ಸಂಗ್ರಹ ಮಾಡುವುದಕ್ಕೆ ಆಗದಿರುವಂಥದ್ದು ಒಂದು ಕಡೆ ಆದರೆ ಇನ್ನು ಕೆಲವು ಕಡೆ ಉದಾಹರಣೆಗೆ ಶಿಕಾರಿಪುರ ತಾಲ್ಲೂಕಿನ ಮಳವಳ್ಳಿ ಎನ್ನುವ ಗ್ರಾಮ ಈ ಸ್ಕೀಂನಲ್ಲಿ ಸೇರಿಲ್ಲ. ಆದರೂ ನಾವು ಬಹಳ ಪ್ರಯತ್ನ ಮಾಡಿ ಅದರಲ್ಲಿ ಜನಗಳನ್ನು ನಾವೇ ತೊಡಗಿಸಿ, ನಿಂತು ಅವರಿಂದ ಕೆಲಸವನ್ನು ಮಾಡಿಸಿ, ಅವರ ಭಾಗದ ಕೆಲಸ ಏನು ಇತ್ತೋ ಅದನ್ನು ಮಾಡಿ ಮುಗಿಸಿ ಒಂದೂವರೆ ಎರಡು ವರ್ಷ ಆದರೂ ಸಹ ಸರ್ಕಾರದಿಂದ ಖರ್ಚುಮಾಡಬೇಕಾಗಿದ್ದ ಹಣ ಏನು ಇದೆ ಆ ಹಣವನ್ನು ಖರ್ಚು ಮಾಡಲಿಲ್ಲ. ಡೀಲೇ ಮಾಡಿದರು. ನಮ್ಮ ಪೋರ್ಷನ್ ಹಣವನ್ನು ಹಾಕಿದರೂ ಕೂಡ ಸರ್ಕಾರ ಕೆಲಸ ಮಾಡಿಲ್ಲವೆಂದು ಇದನ್ನು ನೋಡಿ ಶಿಕಾರಿಪುರದ ಬೇರೆ ಗ್ರಾಮಗಳಿಗೆ ವಿಶ್ವಬ್ಯಾಂಕ್ ಯೋಜನೆ ಸ್ಯಾಂಕ್ಷನ್ ಆಗಿದ್ದರೂ ಅದರ ಬಗ್ಗೆ ವಿಶ್ವಾಸವನ್ನೇ ಕಳೆದುಕೊಂಡರು. ಇದು ಒಂದಾದರೆ, ಇನ್ನು ಕೆಲವು ಕಡೆ ಅಲ್ಲಿಯ ಜನರು ತಮ್ಮ ಪೋರ್ಷನ್ ಹಣವನ್ನು ಕೊಡುವಂಥ ಶಕ್ತಿಯೂ ಕೂಡ ಇಲ್ಲ. ಈ ರೀತಿಯ ಎರಡು ಎಕ್ಸಿಟ್ರೀಮ್ ಪರಿಸ್ಥಿತಿ ಇದೆ. ಇದರಿಂದ ಹಣ ಜನರಿಂದ ಸಂಗ್ರಹ ಮಾಡುವುದು ಮತ್ತು ಅವರು ಕೊಡುವುದಕ್ಕೆ ಕಷ್ಟವಾಗುವುದರಿಂದ ಆ ಹಣವನ್ನೂ ಕೂಡ ರಾಜ್ಯಸರ್ಕಾರದಿಂದ ಕೊಟ್ಟು ಕೊನೆಯಪಕ್ಷ ವರ್ಲ್ಡ್ ಬ್ಯಾಂಕ್ ಸ್ಕೀಂನ ಉಪಯೋಗ ಮಾಡಿಕೊಳ್ಳುವುದಕ್ಕೆ ಏನಾದರೂ ಆಲ್ಟರ್‌ನೇಟ್ ಯೋಜನೆ ಮಾಡದಿದ್ದರೆ, ನಾಲ್ಕೈದು ವರ್ಷ ಡಿಲೇ ಆಗುತ್ತದೆ ಮತ್ತು ಅದರ ಉಪಯೋಗ ಕೂಡ ಆಗುವುದಿಲ್ಲ. ಜನರ ಕಾಂಟ್ರಿಬ್ಯೂಷನ್ ಕೊಟ್ಟು ಕೆಲಸ ಮಾಡಿದರೂ ಕೂಡ ಸರ್ಕಾರದ ಕಾಂಟ್ರಿಬ್ಯೂಷನ್ ದುಡ್ಡು ಕೊಡುತ್ತಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಹಿರಿಯ ನಾಯಕರುಗಳು ಸಲಹೆ ಮಾಡಿರತಕ್ಕಂಥದ್ದು ಯೋಗ್ಯವಾದಂಥ ಸಲಹೆಗಳು ಆಗಿದ್ದರೂ ಕೂಡ, 1993ನೇ ಇಸವಿಯಲ್ಲಿ ಮಾಡಿರತಕ್ಕಂಥ ಷರತ್ತಿನಲ್ಲಿ ವಿಶ್ವಬ್ಯಾಂಕ್ ಯೋಜನೆಯಲ್ಲಿ ಮುಖ್ಯವಾಗಿರತಕ್ಕಂಥದ್ದು ಜನಗಳ ಪಾಲ್ಗೊಳ್ಳುವಿಕೆ ಎನ್ನುವಂಥದ್ದು ಇರಬೇಕು ಎಂಬುದಾಗಿರುತ್ತದೆ. ಆದ್ದರಿಂದ ಜಿಲ್ಲಾ

ಪಂಚಾಯಿತಿಗಳಿಂದಾಗಲಿ, ಗ್ರಾಮಪಂಚಾಯಿತಿಗಳಿಂದಾಗಲಿ ಅಥವಾ ಬೇರೆ ಸರ್ಕಾರಿ ಮೂಲಗಳಿಂದ ಹಣವನ್ನು ಕೊಡುವಂಥದ್ದು ಅಲ್ಲ ಎನ್ನುವಂಥದ್ದು ಆ ಷರತ್ತಿನಲ್ಲಿ ಒಳಪಟ್ಟಿದೆ. ಅದರಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದೇ ತರಹದ ವಂತಿಗೆಯನ್ನು ಗ್ರಾಮದವರು ಕೊಡಬೇಕಾದ ಅಗತ್ಯವಿಲ್ಲವೆಂದು ಹೇಳಿದೆ. ಆದರೆ, ಪರಿಸರ ನೈರ್ಮಲ್ಯಕ್ಕೆ ಸಂಬಂಧಪಟ್ಟಂತೆ ಅದೊಂದು ಪ್ಯಾಕೇಜು. ಕುಡಿಯುವ ನೀರು ಸಂಪೂರ್ಣವಾಗಿ ವಿಶ್ವಬ್ಯಾಂಕ್ ನೆರವಿನಿಂದ ಇರುವುದು. ಆದರೆ, ಪರಿಸರ ನೈರ್ಮಲ್ಯಕ್ಕೆ ಸಂಬಂಧಪಟ್ಟಂತೆ ಶೇ. 30 ಭಾಗ ಹಣವನ್ನು ನಾವು ಕಳುಹಿಸಿಕೊಡಬೇಕಾಗುತ್ತದೆ. ತಾವು ಹೇಳಿದಂತೆ, ಕೆಲವು ಗ್ರಾಮಗಳಲ್ಲಿ ಮಾತ್ರ ಹಣ ಆಗಿಲ್ಲ. ಆದರೆ, ನಮ್ಮ ಅನುಭವದ ಪ್ರಕಾರ, ಈಗಾಗಲೇ ಸುಮಾರು 1ನೇ ಹಂತದಲ್ಲಿ 387.23 ಲಕ್ಷ ರೂಪಾಯಿಗಳನ್ನು ಸಲ್ಲಿಸಬೇಕಾಗಿದ್ದು, ಈಗಾಗಲೇ 316.97ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರ ಬಂದ ಮೇಲೆ ಕಳುಹಿಸಿದೆ. ನಾವು ಅದನ್ನು ಪ್ರೇರೇಪಣೆ, ಪ್ರತಿ ಪ್ರಯತ್ನ ಮಾಡಿದ ಮೇಲೆ ಕಳುಹಿಸಿದ್ದು. ನಮ್ಮ ಗುರಿ ಇದ್ದದ್ದು, 387.23 ಲಕ್ಷ, ಕಳುಹಿಸಿರುವುದು 316.97 ಲಕ್ಷ. ಈಗಾಗಲೇ 2ನೇ ಹಂತದಲ್ಲಿ ಶುರು ಮಾಡಿದಾಗ, ನಾವು ಅವರ ಗುರಿಯನ್ನು ನಿರ್ಧಾರ ಮಾಡಿಲ್ಲ. ನಮ್ಮ ಅನುಭವವಿಷ್ಟೆ, ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದಂತೆ, ಕೆಲಸ ಬೇಗೆ ಬೇಗ ಆಗುತ್ತದೆಂದು ಕಂಡು ಬಂದರೆ, ಆ ಊರಿನವರು ಸ್ವಲ್ಪ ವಂತಿಗೆಯನ್ನು ಕೊಡುತ್ತಾರೆ. ಕೆಲವು ಗ್ರಾಮದವರು ಕೊಡುತ್ತಿಲ್ಲ. ಷರತ್ತುಗಳು ಅಡ್ಡಿ ಬರುತ್ತವೆ. ಷರತ್ತುಗಳನ್ನು ಬದಲಿ ಮಾಡಲು ವಿಶ್ವಬ್ಯಾಂಕಿಗೆ ಹೋದರೆ, ಅದು ಮತ್ತೆ 6 ತಿಂಗಳಾಗುತ್ತದೆ, ತಡವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಡಿಸ್ಟ್ರಿಕ್ಟ್ ರೂರಲ್ ಸೊಸೈಟಿಯಿಂದ ನೀವು ರಿವೈವ್ ಮಾಡಿದರೆ ಒಳ್ಳೆಯದು It is a voluntary agency. That agency will do the work to evaluate voluntary agency. ಅದಕ್ಕೆ ಏನಾಗುತ್ತದೆಂದರೆ, ಹಣವೂ ಸಿಗುತ್ತದೆ. ಡಿ.ಸಿಯವರು ಸ್ವಲ್ಪ ಮುತುವರ್ಜಿ ವಹಿಸಿ ಹಣವನ್ನು ಸಂಗ್ರಹಿಸಿ, ಆ ಊರಿಗೆ ಖರ್ಚು ಮಾಡುತ್ತಾರೆ. ಅದಕ್ಕೆ ಅದು ಹಿಂದೆ ಇತ್ತು. ಇದಕ್ಕೋಸ್ಕರ ಅದನ್ನು ಅಬಾಲಿಷ್ ಮಾಡಿದರು. ವಾಲಂಟರಿ ಏಜೆನ್ಸಿ ಕೆಲಸವನ್ನು ಅವರು ಮಾಡಿರಲಿಲ್ಲ. ಎಲ್ಲಾ ಕೆಲಸಗಳಾಗುತ್ತವೆ.

ಶ್ರೀ ಎಂ. ಪಿ. ಪ್ರಕಾಶ್ : ರೂರಲ್ ವಾಲಂಟರಿ ಆರ್ಯನೈಜೇಷನ್ ರಿವೈವ್ ಮಾಡಬಹುದು. ಆದರೆ, ಈಗಿರುವ ಪದ್ಧತಿಯಲ್ಲಿ ಯಾರು ಯಾರು ಈ ರೀತಿ ವಾಲಂಟರಿ ಆರ್ಗನೈಜೇಷನ್‌ನವರು ಇದ್ದಾರೆ, ಅವರು ಈಗಾಗಲೇ ಪ್ರವೇಶ ಮಾಡಿದ್ದಾರೆ. ಅವರು ಒಂದು ಗ್ರಾಮದಲ್ಲಿ ಹೋಗಿ ವಂತಿಗೆ ಕೊಡಬೇಕೆಂದು ಪ್ರೇರೇಪಣೆ ಮಾಡಿದ್ದರಿಂದ.. ಮಾಡಿದ್ದಾರೆ. ನಿಮ್ಮ ಶಿವಮೊಗ್ಗ, ಸಾಗರ ತಾಲ್ಲೂಕುಗಳಲ್ಲಿ ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮಣಿಪಾಲ್ ವಾಲಂಟರಿ ಸಂಸ್ಥೆಯವರು ಬಂದು ಯಾವ ಗ್ರಾಮಕ್ಕೆ ಹೋಗಿ ಜನರನ್ನು ಪ್ರೇರೇಪಣೆ ಮಾಡಿ ಹಣವನ್ನು ಸಂಗ್ರಹಣೆ ಮಾಡಿದ್ದಾರೆ? ಕಮಿಷನ್ ಹೊಡೆಯುವುದಕ್ಕಿರುವುದು. ಮಣಿಪಾಲ್ ಏಜೆನ್ಸಿಯವರು ಪುಕ್ಕಟೆಯಾಗಿ ಮಾಡಿದ್ದಾರೆಯೇ?

ಶ್ರೀ ಎಂ.ಪಿ. ಪ್ರಕಾಶ್ : ತಾವು ಮೂಲಭೂತವಾಗಿ ಒಂದು ವಿಷಯವನ್ನು ತಿಳಿದುಕೊಳ್ಳಿ. ವಾಲಂಟರಿ ಆರ್ಗನೈಜೇಷನ್ ಅಮೆರಿಕಾ ದೇಶದಲ್ಲಿದ್ದಂತೆ, ಇಲ್ಲಿ ಕೂಡ ಅವರು ಪ್ರಾಮಾಣಿಕರಿಲ್ಲ. ನಿಮ್ಮ ಅಭಿಪ್ರಾಯವನ್ನು ನಾವು ಒಪ್ಪಿಕೊಂಡಿದ್ದೇವೆ. ಪ್ರತಿಯೊಂದು ಸಂದರ್ಶನಕ್ಕೆ ಅವರಿಗೆ 1045 ರೂಪಾಯಿ ಕೊಡುತ್ತಾರೆ. ಅವರು ಬೇರೆ ಬೇರೆ ಅಧಿಕಾರಿಗಳನ್ನು ಹಿಡಿದು ಪ್ರೇರೇಪಣೆ ಮಾಡಿ ಮಾಡಿದ್ದಾರೆ. ಆದರೆ, ಇಲ್ಲಿ ಕಲೆಕ್ಟ್ ಆಗಿರುವುದನ್ನು ಗೊತ್ತಾಗುತ್ತದೆ. 1ನೇ ಹಂತದಲ್ಲಿ 387ಲಕ್ಷ ಹಣ ಕೊಡಬೇಕಾದಾಗ, 316 ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಕೊಟ್ಟಿದ್ದಾರೆ, ಆದರೆ, ಮಣಿಪಾಲ್ ಏಜೆನ್ಸಿಯವರ ಪ್ರೇರೇಪಣೆಯಿಂದಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಯಾವುದೇ ಕಾರಣವಿರಬಹುದು. ಈ ಷರತ್ತಿಗೆ ಒಪ್ಪಿದವರು ಯಾರು? 1993ರಲ್ಲಿ ಈ ಷರತ್ತನ್ನು ವಿಶ್ವಬ್ಯಾಂಕ್ ಯೋಜನೆ ಜೊತೆಯಲ್ಲಿ ಮಾಡಿರತಕ್ಕದ್ದು...

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಖಗೆರ್ಜಿಯವರು ಹೇಳಿದ ರೀತಿಯಲ್ಲಿ, ಯಾವುದೇ ಸಂಸ್ಥೆಗೆ ಕೊಟ್ಟರೆ, ಆ ಕಮಿಷನ್ ಅವರಿಗೆ ಕೊಡುವ ಬದಲಿಗೆ, ಇಲ್ಲೇ ಹಣವನ್ನು ಉಪಯೋಗ ಮಾಡುವುದಕ್ಕೆ ಬರುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ : 2ನೇ ಹಂತದಲ್ಲಿರುವ ಸಂದರ್ಭದಲ್ಲಿ, ಬೇರೆಯವರೂ ಕೂಡ ಭಾಗವಹಿಸಲು ಸಾಧ್ಯತೆಯಿದೆ. ಉಪಯುಕ್ತ ಸಲಹೆಯಾಗಿರುವುದರಿಂದ ಇದನ್ನು ರಿವೈವ್ ಮಾಡುತ್ತೇವೆ. ಆದರೆ, 1ನೇ ಹಂತಕ್ಕೆ ಸಂಬಂಧಿಸಿದಂತೆ ಈ ರೀತಿಯಾಗಿ ಹಣ ಸಂಗ್ರಹ ಮಾಡುವುದಕ್ಕೆ ಬೇರೆ ಬೇರೆ ವಾಲಂಟೀರ್ಸ್ ಕೂಡ ನಾವು ಟೆಂಡರ್ ಕರೆದ ಸಂದರ್ಭದಲ್ಲಿ ಭಾಗವಹಿಸಿದ್ದಾರೆ. ಮಣಿಪಾಲ್ ಇಂಡಸ್ಟ್ರೀಯಲ್ ಟ್ರಸ್ಟ್ ಇದೊಂದು ಎನ್.ಜಿ.ಓ ಸಂಸ್ಥೆ. ಅವರಿಗೆ 42.99 ಲಕ್ಷ ನಾವು ಗುರಿ ಕೊಟ್ಟಿದ್ದೆವು, ಅವರು 41.96ಲಕ್ಷ ಕಳುಹಿಸಿಕೊಟ್ಟಿದ್ದಾರೆ. ಇದೂ ಕೂಡ ರೆಪ್ಯುಟೆಡ್ ಕನ್ಸರ್ನ್. ಯಾರ ಮೂಲಕ ಮಾಡಿದ್ದಾರೆ ಅದು ಬೇರೆ ವಿಷಯ. ತಮ್ಮನ್ನೂ ಕರೆದುಕೊಂಡು ಹೋಗಿ ಕೇಳಿರಬಹುದು. ಆದರೆ, 42.99ಲಕ್ಷ ಗುರಿಯಲ್ಲಿ 41.96ಲಕ್ಷ ಕಳುಹಿಸಿಕೊಟ್ಟಿದ್ದಾರೆ, ಅದೂ ನಿಮ್ಮ ಸಾಗರ ತಾಲ್ಲೂಕಿನಲ್ಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಗ್ರಾಮದ ಜನರ ಪ್ರಯತ್ನದಿಂದಾಗಿದೆಯೇ ವಿನಃ ವಾಲಂಟರಿ ಸಂಸ್ಥೆಯಿಂದ ಆಗಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ತಿಮ್ಮಪ್ಪನವರು ಹೇಳುವುದು ನಿಜವಿದ್ದರೂ ಕೂಡ, ನಮಗೆ ಈ ಪರಿಕಲ್ಪನೆ ಹೊಸದು. ಈ ಷರತ್ತಿಗೆ ನಾವು ಒಪ್ಪದಿರಬೇಕಾಗಿತ್ತು. ವಿಶ್ವಬ್ಯಾಂಕ್ ಯೋಜನೆ ಜೊತೆ ನಾವು ಒಪ್ಪಂದ ಮಾಡಿಕೊಂಡ ಷರತ್ತಿನಲ್ಲಿ ಈ ರೀತಿಯ ಸ್ವಯಂ ಸಂಸ್ಥೆಗಳಿಗೆ ಪ್ರೇರೇಪಣೆ ಮಾಡಲಿಕ್ಕಾಗಿಯೇ ಹಣ ಕೊಡಬೇಕೆಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಷರತ್ತಿನ ಪ್ರಕಾರ ಮಾಡಿ, ವಾಲಂಟರಿ ಏಜೆನ್ಸಿ ಮುಖಾಂತರವೇ ಮಾಡಿ. ಆದರೆ, ಅದು ಆಗುತ್ತಿದೆಯೇ, ಇಲ್ಲವೇ ಎಂಬುದನ್ನು ಮಾನಿಟರ್ ಮಾಡಿ

ಎಂದು ಹೇಳುತ್ತಿದ್ದೇವೆ. ಫಿಗರ್ಸ್ ಬಹಳ ಸುಲಭ. ಇದು ಸಣ್ಣ ವಿಚಾರ. ಕನೆಕ್ಟ್ ಮಾಡಲಿಕ್ಕೆ, ಎನರೆಜೈಸ್ ಮಾಡಲಿಕ್ಕೆ, ಕೇಬಿ ರೆಡಿ ಇದೆ ಎನರ್‌ಜೈಸ್ ಮಾಡಲಿಕ್ಕೆ ತಯಾರಿಲ್ಲ. ಏಕೆಂದರೆ, ಅವರಿಗೆ ಬೇಕಾಗಿಲ್ಲ. ಆ ಸೆನ್ಸಿಟಿವಿಟಿ ಇಲ್ಲ. ಷರತ್ತು ಸರಿ, ವಾಲಂಟರಿ ಏಜೆನ್ಸಿಗೆ ಕೊಡಿ ನಾವು ಆಡ್ಡಿ ಮಾಡುವುದಿಲ್ಲ. ಅದು ಸರಿಯಾಗಿ ಮಾಡುತ್ತಿದೆಯೇ, ಇಲ್ಲವೇ ಎಂಬುದನ್ನು ಮಾನಿಟರ್ ಮಾಡಿ. ಸರಿಯಾಗಿ ಇಂಪ್ಲಿಮೆಂಟ್ ಆಗುತ್ತಿದೆಯೇ, ಇಲ್ಲವೇ ಎಂಬುದನ್ನು ವ್ಯಾವಹಾರಿಕವಾಗಿ ತಾವು, ತಮ್ಮ ಇಲಾಖೆಯವರು ನೋಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಎಂ.ಪಿ. ಪ್ರಕಾಶ್ : ಅವರ ಸಲಹೆ ಸಂಪೂರ್ಣವಾಗಿ ಯೋಗ್ಯವಾಗಿದೆ. 1993ನೇ ಇಸವಿಯಲ್ಲಿ ಷರತ್ತನ್ನು ಒಪ್ಪಿ ಪ್ರಾರಂಭವಾಗಿದ್ದರೂ ಕೂಡ, 1995ರವರೆಗೂ ಕೆಲಸವೇನೂ ಪ್ರಾರಂಭವಾಗಿರಲಿಲ್ಲ.1995ರನಂತರ ಈ ಕೆಲಸ ಪ್ರಾರಂಭವಾಗಿದೆ. ತಾವು ಹೇಳಿದಂತೆ, ಮಾನಿಟರಿಂಗ್ ಮಾಡುತ್ತೇನೆ.

ಉಪಾಧ್ಯಕ್ಷರು : ಒಂದೂವರೆ ಗಂಟೆಯಾಯಿತು. ತಾವು ಅನಂತರ ಮಾತನಾಡಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ಕೇಳಿದೆ. ನನಗೆ ಅವಕಾಶವೇ ಕೊಡಲಿಲ್ಲ. ಕುಳಿತರೆ ಏನು ಮಾಡುವುದು? ನೀವು ಕೇಳಬೇಕು. ಅವರು ಎದ್ದಾಗ, ನೀವು ಸುಮ್ಮನೆ ಕುಳಿತುಕೊಳ್ಳುತ್ತೀರಿ. ಒಂದೂವರೆ ಗಂಟೆಯಾಯಿತು. ಪ್ರಶ್ನೋತ್ತರ ವೇಳೆ ಇರುವುದು ಒಂದು ಗಂಟೆ ಮಾತ್ರ. ನೀವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : 28 ಯೋಜನೆಗಳಿವೆ. 3 ವರ್ಷಗಳಲ್ಲಿ ನಮ್ಮ ಸಾಧನೆ ಒಂದು. ಉಳಿದಿರುವುದು 8 ಯೋಜನೆಗಳು. ನೀವು ಮೇ ನಲ್ಲಿ ಮಾಡುತ್ತೇವೆಂದು ಹೇಳಿದಿರಿ. ಮೇನಲ್ಲಿ ಮಾಡಿಕೊಟ್ಟರೆ ನಿಮ್ಮನ್ನು ನಾನು ಅಭಿನಂದಿಸುತ್ತೇನೆ. ಆದರೆ, ನೀವು ಮಾಡಿಕೊಡುವುದಕ್ಕಾಗುವುದಿಲ್ಲ. ಏಕೆಂದರೆ, ಜಿಲ್ಲಾಪಂಚಾಯಿತಿಯಲ್ಲಿ ನಾವು ಸಭೆ ಕರೆದಿದ್ದೇವೆ. ಅವರಿಗೆ ಒಂದು ಹೆಜ್ಜೆ ಕೂಡ ಮುಂದೆ ಹೋಗಲಿಕ್ಕಾಗಲಿಲ್ಲ. ಗ್ರಾಮಕ್ಕೆ ಭೇಟಿ ಕೊಡುತ್ತಿಲ್ಲ. ಏನು ಕೆಲಸವಾಗುತ್ತಿದೆ ಎಂಬುದೂ ಸಹ ಗೊತ್ತಿಲ್ಲ. ಅಂಥ ಪರಿಸ್ಥಿತಿಯಲ್ಲಿದ್ದೇವೆ. ಚರ್ಚೆ ಮಾಡುವುದು ಬೇಕಾಗಿಲ್ಲ. ಮೇ ಗೆ ತಾವು ಮಾಡಿಸಿಕೊಟ್ಟರೆ ನಿಮಗೆ ನನ್ನ ಸಂಪೂರ್ಣ ಅಭಿನಂದನೆಗಳು. ಇಲ್ಲದಿದ್ದರೆ, ತಮ್ಮ ಬದಲಿ ವ್ಯವಸ್ಥೆಯಲ್ಲಿ ಏಕೆಂದರೆ ತಾವು ಹೇಳಿದಿರಿ, 89ರಲ್ಲಿ ಪ್ರಾರಂಭವಾಯಿತು. 1993ರಲ್ಲಿ 2ನೇ ಹಂತ ಆಯಿತು. ಈಗ 1998. ಇಷ್ಟು ವರ್ಷಗಳಲ್ಲಿ ನಮ್ಮ ಸಾಧನೆ ಒಂದು. ಆದ್ದರಿಂದ, ವಿಶ್ವಬ್ಯಾಂಕ್ ಯೋಜನೆ ಎನ್ನುವುದು ಶಾಪ. ಅದು ಬೇಕಾಗಿಲ್ಲ. ನಾವು ಜಿಲ್ಲಾಪಂಚಾಯಿತಿಯಿಂದ ಮಾಡಿಸಿಕೊಂಡು ಹೋಗುತ್ತೇವೆ. ನಮ್ಮ ಕ್ಷೇತ್ರದಲ್ಲಿ ಇವತ್ತು ಆಗದಿರುವುದು ಕುಡಿಯುವ ನೀರಿನ ಯೋಜನೆ ಮಾತ್ರ. ಮತ್ತೆಲ್ಲಾ ಯೋಜನೆಗಳಾಗಿವೆ. ಈ ವಿಶ್ವಬ್ಯಾಂಕ್ ಆನೆಯನ್ನು ನಮ್ಮ ಮೇಲೆ ಹೇರಬೇಡಿ. ನಾವು ನಮ್ಮಷ್ಟಕ್ಕೆ ಬದುಕಲು ವ್ಯವಸ್ಥೆ ಮಾಡಿ.

ಶ್ರೀ ಎಂ. ಪಿ. ಪ್ರಕಾಶ್ : ಆನೆಯನ್ನು ತಂದದವರೇ ತಾವು. ಈಗಾಗಲೇ ಆನೆ ಬಂದಿದೆ. ಆದ್ದರಿಂದ, ಇದನ್ನು ಸಾಕೇ ಸಾಕಬೇಕು, ಪಳಗಿಸಬೇಕಾಗಿದೆ. ಈಗಾಗಲೇ ಪಳಗಿಸಿದ್ದೇವೆ. ಏಳೂವರೆ ಲಕ್ಷ ರೂಪಾಯಿ ದಂಡ ಹಾಕಿದ್ದೇವೆ. ಮೇ ನಲ್ಲಿ ಖಂಡಿತವಾಗಿಯೂ ಕೂಡ ಮಾಡಿ ಕೊಟ್ಟೇ

ಕೊಡುತ್ತೇವೆ. ಒಂದು ವೇಳೆ ಅದನ್ನು ಮೇ ತಿಂಗಳಲ್ಲಿ ಮಾಡದಿದ್ದರೆ, ಆತನನ್ನು ಕಪ್ಪು ಪಟ್ಟಿಗೆ ಸೇರಿಸಿ, ಟೆಂಡರ್ ಷರತ್ತಿನ ಪ್ರಕಾರ, ರದ್ದುಪಡಿಸಿ ಜಿಲ್ಲಾ ಪಂಚಾಯಿತಿಯಿಂದ ಸಂಪೂರ್ಣಗೊಳಿಸಿಕೊಡುತ್ತೇವೆ.

ಉಪಾಧ್ಯಕ್ಷರು : ಶ್ರೀ ಶಿವರಾಮ್‌ರವರು ಕೇಳಿರುವ ಪ್ರಶ್ನೆಗೆ ಸಮಯ ಕೇಳಿದ್ದಾರೆ.

ರಾಜ್ಯದಲ್ಲಿ ವೈದ್ಯಾಧಿಕಾರಿಗಳ ನೇಮಕ

159 - ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಆರೋಗ್ಯ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯ ಸಂಖ್ಯೆ ಎಷ್ಟು?

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) :

ಅ) 733

ಆ) ಗ್ರಾಮೀಣಾ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೆ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ತಜ್ಞರ ಹುದ್ದೆಗಳನ್ನು ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ತುಂಬಲಾಗುವುದು.

ಶ್ರೀ ವೈಜನಾಥ್ ಪಾಟೀಲ್ : ಈ ತರಹ ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಮೊದಲೇ ದವಾಖಾನೆಗಳು ಕಡಿಮೆ, ಅದರಲ್ಲಿ ವೈದ್ಯರ ಕೊರತೆ ಬೇರೆ ಇದೆ. ಕೆಲವೊಂದು ಕಡೆ ಅಪಾಯಿಂಟ್‌ಮೆಂಟ್ ಆದರೂ ಕೂಡ, ಒಂದು ದಿವಸ ಹೋಗುತ್ತಾರೆ. ಮೂರು ದಿವಸ ಹೋಗುವುದಿಲ್ಲ. ಚಿಂಚೋಳಿ ಪ್ರಾಪರ್‌ನಲ್ಲಿ 5 ವೈದ್ಯರು ಬೇಕು. ಇಬ್ಬರು ಕೆಲಸ ಮಾಡುತ್ತಿದ್ದಾರೆ. ಅಲ್ಲೊಂದು ಎಕ್ಸ್-ರೆ ಮೆಷೀನ್ 3-4 ವರ್ಷಗಳಿಂದಿದೆ. ಟೆಕ್ನಿಷನ್ ಇಲ್ಲ. ಬಹಳಷ್ಟು ಸ್ಟಾಫ್ ಕೊರತೆಯಿದೆ. ಜನರಿಗೆ ತ್ರಾಸಾಗುತ್ತಿದೆ. ಸರ್ಕಾರದವರು ಈ. ಕಡೆ ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಡಾ|| ಎಚ್.ಸಿ. ಮಹಾದೇವಪ್ಪ : ಖಾಲಿ ಹುದ್ದೆಗಳನ್ನು ತುಂಬಲು ಕ್ರಮಕೈಗೊಂಡಿದ್ದಾರೆ. 7ನೇ ತಾರೀಖು ಗುಲ್ಬರ್ಗಾಗೆ ಮುಖ್ಯಮಂತ್ರಿಗಳು ಭೇಟಿ ಕೊಟ್ಟ ಸಂದರ್ಭದಲ್ಲಿ ಇಂಟರ್‌ವ್ಯೂ ಮುಗಿದಿತ್ತು. ಮುಗಿದ ತಕ್ಷಣವೇ ಇನ್ನೊಂದು 4-5 ದಿನಗಳಲ್ಲಿ ಪೋಸ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ತುಂಬಲು ಆರೋಗ್ಯ ಇಲಾಖೆಗೆ ಯಾವುದೇ ನಿರ್ಬಂಧವಿಲ್ಲವೆಂದು ಹಣಕಾಸು ಇಲಾಖೆ ಈಗಾಗಲೇ ಹೇಳಿದೆ.

1.00 ಪಿ.ಎಂ

ಶ್ರೀ ವೈಜನಾಥ ಪಾಟೀಲ್ : ಈಗ ಬಹಳಷ್ಟು ಡಾಕ್ಟರುಗಳು ಹಳ್ಳಿಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಕಾರಣ ಏನೆಂದರೆ, ಅವರು ಸಿಟಿಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿರುತ್ತಾರೆ. ಆದ್ದರಿಂದ,